ಜಮಖಂಡಿಯ ಸಾವಳಗಿಯಲ್ಲಿ ಬಸ್ ನಿಲ್ದಾಣ ನಿರ್ಮಾಣ

೨೬೪ (೭೩೧) ಶ್ರೀ ಬಾಬುರೆಡ್ಡಿ ತುಂಗಳ್ (ಬೆಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಸಚಿವರು ದಯವಿಟ್ಟು ಉತ್ತರಿಸುವರೇ :—

ಅ) ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅಲ್ಲಿನ ಗ್ರಾಮ ಪಂಚಾಯಿತಿಯಿಂದ ಜಮೀನು ಪಕಪಡಿಸಿ ಕೊಳ್ಳಲಾಗಿದೆಯೇ ?

ಆ) ಈ ಜಮೀನು ಸ್ವಾಧೀನಪಡಿಸಿಕೊಂಡಿದ್ದರೂ ಈ ಬಗ್ಗೆ ಹಣವನ್ನು ತುಂಬಲಾಗಿದೆಯೆ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಈ) ಬಸ್ ನಿಲ್ದಾಣದ ನಿರ್ಮಾಣ ಕಾರ್ಯ ಯಾವಾಗ ಆರಂಭವಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಸಾರಿಗೆ ಸಚಿವರು).—

ಅ) ಇಲ್ಲ.

ಆ)
ಇ)
ಈ) } ಮೇಲಿನ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಸಾವಳಗಿ ಪಂಚಾಯತಿಯವರು ಈಗಾಗಲೇ ಊರಿನ ಮಹತ್ವವಾದ ಕೇಂದ್ರ ಸ್ಥಳವನ್ನು ೮೦ ರೂಪಾಯಿಗಳಿಗೆ ನಾಮಕಾವಸ್ತೆ ಬೆಲೆಗೆ ಬಿಟ್ಟು ಕೊಟ್ಟಿದ್ದಾರೆ. ಈ ಬಗ್ಗೆ ಕೆ.ಎಸ್.ಆರ್.ಟಿ.ಸಿ.ಯ ಡಿವಿಜನಲ್ ಕಂಟ್ರೋಲರ್‌ರವರಿಗೆ ಪತ್ರ ಬರೆದು ಕಳುಹಿಸಿದ್ದಾರೆ. ಆ ಬಸ್‌ಸ್ಟ್ಯಾಂಡ್ ಮಾಡಬೇಕಿದಿರುವ ಜಾಗದಲ್ಲಿ ೧೦-೧೫ ವರ್ಷಗಳಿಂದ ಇದ್ದ ಬಾಡಿಗೆದಾರರನ್ನು ಬಿಡಿಸುವಂತಹ ಕ್ರಮ ಆಗಿದೆ. ಈ ಊರಿನಲ್ಲಿ ೧೦ ಸಾವಿರ ಜನಸಂಖ್ಯೆ ಇದ್ದು, ಇದು ಜಮಖಂಡಿ ಸಂಸ್ಥಾನದ ಪ್ರಸಿದ್ಧವಾದ ಊರು ಹಾಗೂ ಮಾನ್ಯ ಬಿ.ಡಿ. ಜತ್ತಿಯವರ ಗ್ರಾಮವಾಗಿದೆ. ಸ್ಥಳ ಮಹತ್ವದ ಮೇಲಾದರೂ ಸಹ ಅಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಾಣ ಮಾಡುತ್ತೀರಾ ? ಪಂಚಾಯತಿಯವರು ಬಿಟ್ಟುಕೊಟ್ಟಿರುವ ಜಾಗವನ್ನು ತಪ್ಪು ದಾಖಲೆಗೆ ಸೇರಿಸಿಕೊಂಡ ಮೇಲಾದರೂ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಬಿಜಾಪುರಕ್ಕೆ ಮುಂದಿನ ತಿಂಗಳು ಹೋಗುತ್ತಿದ್ದೇನೆ. ಆಗ ಸ್ಥಳವನ್ನು ಖುದ್ದಾಗಿ ನೋಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಬೆಂಗಳೂರು ಹಾಗೂ ಇತರ ನಗರಗಳಿಗೆ ಜನಗಳ ವಲಸೆ

೨೪೬ (೮೫೭) ಶ್ರೀ ಜಿ. ನಾರಾಯಣಕುಮಾರ್ (ಬಿನ್ನಿಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಬೆಂಗಳೂರು ಹಾಗೂ ರಾಜ್ಯದ ಇತರೆ ಪ್ರಮುಖ ನಗರಗಳಿಗೆ ಬೇರೆ ರಾಜ್ಯಗಳಿಂದ ವಲಸೆ ಬರುತ್ತಿರುವ ಜನಗಳಿಂದ ರಾಜ್ಯದ ಸೌಂದರ್ಯಕ್ಕೆ ಮಾರಕವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಇದನ್ನು ತಡೆಯಲು ಸರಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಅ) ಬಂದಿದೆ, ಬೇರೆ ರಾಜ್ಯಗಳಿಂದ ಬೆಂಗಳೂರು ಹಾಗೂ ರಾಜ್ಯದ ಇತರ ಪ್ರಮುಖ ನಗರಗಳಿಗೆ ಕೆಲವು ಜನರು ಬೇರೆ ರಾಜ್ಯಗಳಿಂದ ಪಲಸೆ ಬಂದಿರುತ್ತಾರೆ. ಆದರೆ ಪಲಸೆಗಾರರಿಂದ ರಾಜ್ಯದ ಸೌಂದರ್ಯಕ್ಕೆ ಮಾರಕವಾಗುವ ಘಟನೆಗಳು ಇದುವರೆವಿಗೂ ಗಮನಕ್ಕೆ ಬರುವುದಿಲ್ಲ.

ಆ) ಖಂಡಿಕೆ (ಅ) ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೊನ್ನಾಳಿಯಲ್ಲಿ ಬಸ್ಸು ನಿಲ್ದಾಣದ ನಿರ್ಮಾಣ

೨೫೨ (೫೭೩) ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ಪಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ:—

ಅ) ಹೊನ್ನಾಳಿಯಲ್ಲಿ ಬಸ್ ನಿಲ್ದಾಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆಲ್ಲಿ ಸದರಿ ನಿಲ್ದಾಣವನ್ನು ನಿರ್ವಹಿಸಲಾಗುವುದೆ ? ಹಾಗಿದ್ದಲ್ಲಿ ಯಾವಾಗ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಮತ್ತು ಪಸತಿ ರಾಜ್ಯ ಸಚಿವರು).—

ಅ) ಹೊನ್ನಾಳಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಿಲ್ದಾಣವು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಬಸ್ ನಿಲ್ದಾಣವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಪಹಿಸಿ ಕೊಡುವ ಉದ್ದೇಶ ಸದ್ಯದಲ್ಲಿಲ್ಲ.

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಮತ್ತು ಇತ್ಯರ್ಥವಾದ ರಿಟ್ ಅರ್ಜಿಗಳ ಹಾಗೂ ಮೇಲ್ಮನವಿಗಳ ಅಪೀಲುಗಳ ಸಂಖ್ಯೆ

೨೫೫ (೨೬೮) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ರಿಟ್ ಅರ್ಜಿಗಳ ಹಾಗೂ ಮೇಲ್ಮನವಿಗಳ ಅಪೀಲುಗಳ ಸಂಖ್ಯೆ ಎಷ್ಟು?

ಆ) ೧೯೮೨-೮೩, ೧೯೮೩-೮೪ ಮತ್ತು ೧೯೮೪-೮೫ನೇ ವರ್ಷಗಳಲ್ಲಿ ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ದಾಖಲಾದ ಮೇಲ್ಮನವಿಗಳ ಅಪೀಲುಗಳ ಸಂಖ್ಯೆ:

೧೯೮೨-೮೩	...	೭,೭೫೧
೧೯೮೩-೮೪	...	೬,೦೧೪
೧೯೮೪-೮೫	...	೬,೧೮೬

ದಾಖಲಾದ ರಿಟ್ ಅರ್ಜಿಗಳ ಸಂಖ್ಯೆ :

೧೯೮೨-೮೩	...	೩೬,೭೩೪
೧೯೮೩-೮೪	...	೨೩,೮೫೯
೧೯೮೪-೮೫	...	೧೯,೮೭೧